## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪಿ.ಎ.ಎಜುಕೇಷನಲ್ ಟ್ರಸ್ಟ್ (ರಿ), ಮಂಗಳೂರು ಇವರು ಪಿ.ಎ.ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ ಹೊಸದಾಗಿ ಬಿ.ಫಾರ್ಮ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಧರ್ಮದರ್ಶಿ, ಪಿ.ಎ. ಎಜುಕೇಷನಲ್ ಟ್ರಸ್ಟ್ (ರಿ), ಮಂಗಳೂರು ಇವರ ಪತ್ರ ಸಂಖ್ಯೆ: ಪಿಎಇಟಿ/ಸಿಹೆಚ್‌ಆರ್/2017-18, ದಿನಾಂಕ: 05.01.2018.
2. ಅಪರ ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರ ವರದಿ ಸಂಖ್ಯೆ:ಔನಿಇ/262/ಯೋಜನೆ/2017-18, ದಿನಾಂಕ:02.08.2018.
3. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ಪ್ರಸ್ತಾವನೆ ಸಂಖ್ಯೆ:ಎಸಿಎ/ಎಫ್/ಪಿಹೆಚ್-117/2018-19, ದಿನಾಂಕ: 08.08.2018.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಸಂ (1)ರ ಪತ್ರದಲ್ಲಿ, ಧರ್ಮದರ್ಶಿ, ಪಿ.ಎ. ಎಜುಕೇಷನಲ್ ಟ್ರಸ್ಟ್, ನಡುಪದವು, ಮೊಂಟೆಪದವು ಅಂಚೆ, ಕೈರಂಗಾಲ, ಮಂಗಳೂರು ವಿಶ್ವವಿದ್ಯಾಲಯದ ಹತ್ತಿರ, ಮಂಗಳೂರು ಇವರು ತಮ್ಮ ಟ್ರಸ್ಟ್ ವತಿಯಿಂದ ಹಲವು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದು, ಪ್ರಸ್ತುತ ಬಿ.ಫಾರ್ಮ ಕೋರ್ಸ್ ಪ್ರಾರಂಭಿಸಲು ನಿರ್ಧರಿಸಿದ್ದು, ಅಗತ್ಯ ಸೌಲಭ್ಯಗಳನ್ನು ಹೊಂದಿರುವುದರಿಂದ, ಪಿ.ಎ.ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ 2018-19ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಸಂ (2)ರ ವರದಿಯಲ್ಲಿ, ಅಪರ ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರು ಪಿ.ಎ. ಎಜುಕೇಷನಲ್ ಟ್ರಸ್ಟ್ (ರಿ), ಮಂಗಳೂರು ಇವರು ಹೊಸದಾಗಿ ಬಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರು ಸಲ್ಲಿಸಿರುವ ಪರಿವೀಕ್ಷಣಾ ವರದಿಯನುಸಾರ ಸದರಿ ಸಂಸ್ಥೆಯು ಸರ್ವೆ ನಂ. 2ಸದರಿ ಟ್ರಸ್ಟ್ ಮಂಗಳೂರಿನ ಮೊಂಟೆಪಡವ ಅಂಚೆ, ನಡುಪಡವ ಗ್ರಾಮದ ಸರ್ವೆ ನಂ.217 ಮತ್ತು 213ರಲ್ಲಿ ಒಟ್ಟು 2.70 ಎಕರೆ ಜಾಗವನ್ನು ಹೊಂದಿದ್ದು, 1111.39 ಚದರ ಮೀಟರ್ ಅಳತೆಯ ಸ್ವಂತ ಕಟ್ಟಡವನ್ನು ನಿರ್ಮಿಸಿದ್ದು, ಇಲ್ಲಿ 60 ವಿದ್ಯಾರ್ಥಿಗಳ ಪ್ರಥಮ ಬಿ.ಫಾರ್ಮ ಕೋರ್ಸ್ ಪ್ರಾರಂಭಿಸಲು ಅಗತ್ಯವಾದ ಮೂಲಸೌಕರ್ಯಗಳನ್ನು ಹೊಂದಿರುವುದರಿಂದ ಅನುಮತಿ ನೀಡಬಹುದಾಗಿದೆಯೆಂದು ಅಭಿಪ್ರಾಯ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಸಂ (3)ರ ಪ್ರಸ್ತಾವನೆಯಲ್ಲಿ, ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ಪಿ.ಎ. ಎಜುಕೇಷನಲ್ ಟ್ರಸ್ಟ್ (ರಿ) ಇವರು ಪಿ.ಎ.ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ ನಡುಪದವು, ಮೊಂಟೆಪದವು ಅಂಚೆ, ಕೈರಂಗಾಲ ಗ್ರಾಮ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ 2018-19ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ 60 ವಿದ್ಯಾರ್ಥಿಗಳ ಪ್ರವೇಶ ಮಿತಿಯಲ್ಲಿ ಬಿ.ಫಾರ್ಮ ಕೋರ್ಸ್ ಪ್ರಾರಂಭಿಸಲು ವಿಶ್ವವಿದ್ಯಾಲಯವು ಅಫಿಲಿಯೇಷನ್ ನೀಡಲು ಅನುಮೋದನೆ ನೀಡಿದ್ದು, ಇದನ್ನು ಪರಿಗಣಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಅಪರ ಔಷಧ ನಿಯಂತ್ರಕರ ವರದಿ, ಕುಲಸಚಿವರ ಪ್ರಸ್ತಾವನೆ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಪಿ.ಎ. ಎಜುಕೇಷನಲ್ ಟ್ರಸ್ಟ್ (ರಿ), ಮಂಗಳೂರು ಇವರು 2018-19ನೇ ಶೈಕ್ಷಣಿಕ ಸಾಲಿನಿಂದ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಥಮ ಬಿ.ಫಾರ್ಮ ಕೋರ್ಸ್ ಪ್ರಾರಂಭಿಸಲು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ಮತ್ತು ಎ.ಐ.ಸಿ.ಟಿ.ಇ ನವದೆಹಲಿ ಹಾಗೂ ಅಗತ್ಯವಿರುವ ಇತರೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ಅನುಮತಿ ನೀಡಲು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 32 ಪಿಟಿಡಿ 2018, ಬೆಂಗಳೂರು, ದಿನಾಂಕ:16.08.2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪಿ.ಎ. ಎಜುಕೇಷನಲ್ ಟ್ರಸ್ಟ್, ನಡುಪದವು, ಮೊಂಟೆಪದವು ಅಂಚೆ, ಕೈರಂಗಾಲ, ಮಂಗಳೂರು ವಿಶ್ವವಿದ್ಯಾಲಯದ ಹತ್ತಿರ, ಮಂಗಳೂರು ಇವರು ಸರ್ವೆ ನಂ.217 ಮತ್ತು 213, ನಡುಪದವು, ಮೊಂಟೆಪದವು ಅಂಚೆ, ಕೈರಂಗಾಲ ಗ್ರಾಮ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ 2018-19ನೇ ಶೈಕ್ಷಣಿಕ ಸಾಲಿನಿಂದ ಪಿ.ಎ. ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ 60 (ಅರವತ್ತು) ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಥಮ ಬಿ.ಫಾರ್ಮ ಕೋರ್ಸ್ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1. ಪ್ರಸ್ತಾಪಿಸಿರುವ ಬಿ.ಫಾರ್ಮಸಿ ಕಾಲೇಜು/ಕೋರ್ಸ್‌ನ್ನು ಪ್ರಾರಂಭಿಸುವ ಮೊದಲು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಇವರಿಂದ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮೋದನೆ/ ಅನುಮತಿಯನ್ನು ಪಡೆಯತಕ್ಕದ್ದು.
2. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಎಲ್ಲಾ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
3. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮ/ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು ಮತ್ತು ಸರ್ಕಾರಿ ಕೋಟಾ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.
4. ಅಖಿಲ ಭಾರತ ತಾಂತಿಕ ಶಿಕ್ಷಣ ಪರಿಷತ್ತು/ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ರಾಜ್ಯ/ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
6. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
7. ಸಂಸ್ಥೆಗೆ ಮಂಜೂರಾಗುವ ಒಟ್ಟು ಸೀಟುಗಳಲ್ಲಿ ಸರ್ಕಾರವು ನಿಗದಿಪಡಿಸಿದ ಅನುಪಾತದಲ್ಲಿ ಸರ್ಕಾರಿ ಕೋಟಾ ಸೀಟುಗಳನ್ನು ಸರ್ಕಾರಕ್ಕೆ ಬಿಟ್ಟುಕೊಡತಕ್ಕದ್ದು.
8. ಸರ್ಕಾರ/ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.

9. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದ್ದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)
(ದೂರವಾಣಿ ಸಂಖ್ಯೆ:22034292)

**ಇವರಿಗೆಃ**

1. The Registrar-cum-Secretary, Pharmacy Council of India, P.B. No.7020, Combined Councils Building, Kotla Road, Aiwan-E-Ghalib Marg, New Delhi-110 002.
2. The Member Secretary, All India Council for Technical Education, Nelson Mandela Marg, Vasanth Kunj, New Delhi – 110 067
3. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು-41.
5. ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ.ಕಾಳಿಂಗರಾವ್ ರಸ್ತೆ, ಬೆಂಗಳೂರು-560 027.
6. ಧರ್ಮದರ್ಶಿ, ಪಿ.ಎ. ಎಜುಕೇಷನಲ್ ಟ್ರಸ್ಟ್, ನಡುಪದವು, ಮೊಂಟೆಪದವು ಅಂಚೆ, ಕೈರಂಗಾಲ, ಮಂಗಳೂರು ವಿಶ್ವವಿದ್ಯಾಲಯದ ಹತ್ತಿರ, ಮಂಗಳೂರು.

**ಪ್ರತಿಗಳು:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರಿಗೆ.
3. ಸರ್ಕಾರದ ಉಪ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

# Proceedings of Govt. of Karnataka

**Subject:** Permission to P.A Educational Trust to start new B.Pharma course in P.A. College of Pharmacy-reg.

Read : 1. Letter No.PAET/CHR/2017-2018 Dated:05.01.2018 from the Trustee P.A. Educational Trust ( R) Mangalore.

2. Report No.DCD/262/Planning/2017-2018 Dated 02.08.2018 of additional controller of Drugs, Drugs department Bangalore.

3. Proceedings No.Aca/AFF/PH-117/2018-2019 Dated 08.08.2018 of Registrar RGUHS Bangalore.

## Proceedings

In the read letter of PAET serial No.1 referred above Trustee P.A Educational Trust (R ) Nadupadavu, Montepadavu Post Kairangala Village Near Mangalore University , Mangalore -574153 running various educational institutions and now decided to start B.Pharma course in P.A.College of Pharmacy and it possess all required infrastructure and other facilities and requested permission to start B.Pharma course from the academic 2018-2019.

In the read report referred ( Serial No.2) above additional controller of drugs, drugs department Bangalore in connection with starting P.A.College of Pharmacy by P.A Educational Trust (R ) Nadupadavu, Montepadavu Post, Kairangala Village, Near Mangalore University , Mangalore -574153, based on the inspection report submitted by Principal, Govt. Pharmacy College Bangalore as given his view that the Trust owns 2.7 acres of land in survey No.217 & 213 and also required building to conduct I year B.Pharma course and recommended for starting B.Pharma course with 60 intake from the academic year 2018-2019.

In the read letter referred (Serial No.3) above Registrar Rajiv Gandhi University of Health Sciences Mangalore recommended the application of P.A. Educational Trust (R) to start new Pharmacy college in the name and style of P.A. College of Pharmacy at Nadupadavu, Montepadavu Post, Kairangala Village, Near Mangalore University , Mangalore -574153 from the academic year 2018- 2019 with B.Pharma course with an intake of 60 seats and requested the Govt. of Karnataka to consider the same.

By examining the report submitted by additional controller of Drugs, Registrar's recommendation and available documents the Govt. of Karnataka has decided to

NOTARY
ZAHID HUSSAIN
Advocate & Notary
Dakshina Kannada Dist.
(Karnataka)
Regd. No. 12575

permit P.A. Educational Trust (R) Mangalore to start new B.Pharma course with an intake of 60 seats from the academic year 2018-2019 subject to the condition of obtaining permission from PCI/AICTE also from other statutory bodies. Hence this order;

**<u>Govt. Order No.HFW32PTD2018, Bangalore, Dated :16.08.2018</u>**

On the background of the explanation given in the proceedings, P.A.Educational Trust ( R) is permitted to start P.A. College of Pharmacy at Nadupadavu, Montepadavu Post, Kairangala Village, Near Mangalore University , Mangalore - 574153 in survey No 217 & 213 with B.Pharma course with an intake of 60 seats from the academic year 2018-2019 subject to the following terms and conditions.

1. Permission to be obtained from PCI/AICTE and RGUHS Bangalore before starting the college /course.
2. The College shall create infrastructural facilities and to appoint required faculty before starting course / college
3. The college shall abide by the rules/ regulations of Govt. in connection with admission and seat sharing .
4. The college shall strictly follow the rules and regulations of AICTE/PCI.
5. The college shall follow the rules and regulations framed by the government from time to time.
6. The college will not get any kind of grant from the government of Karnataka and the approval is purely on permanently unaided basis.
7. Out of total sanctioned seats the govt. quota of seats to be handed over to the Govt. (as fixed by the Govt. from time to time).
8. The name and place of the college cannot be changed for any reason without obtaining prior permission from the Govt./ authority.
9. Violation of any of the mentioned condition will result in withdrawal of affiliation / permission.

By order and in the name of Governor of Karnataka,

Sd/-

(B.Kamalamma)
Under Secretary to Govt.
Health and Family Welfare
(Indian Medicine System)
Ph: 080-22034292

NOTARY
ZAHID HUSSAIN
Advocate & Notary
Dakshina Kannada Dist.
(Karnataka)
GOVT. OF INDIA

To

1. The Registrar-cum-Secretary

   Pharmacy Council of India, P.B.No7020, Combined Councils Building, Kotla Road, Aiwan-E-Ghalib Marg, New Delhi-110002 .

2. The Member Secretary, All India Council for Technical Education, Nelson Mandela Marg, Vasanth Kunj, New Delhi- 110067
3. The Registrar, Rajiv Gandhi University of Health Sciences, 4th T Block, Jayanagara, Bangalore – 41
4. The Member Secretary, Examination Authority , Govt.. Pharmacy College, P.Kalinga Rao Road, Bangalore -27
5. Trustee, P.A.Educational Trust ( R) Nadupadavu, Montepadavu Post, Kairangala Village, Near Mangalore University , Mangalore -574153

CC

1. Personal Secretary, to Hon. Minister for Health and family Welfare Vikas Saudha Bangalore.
2. Gazetted Assistant to The Principal Secretary to Govt. of Karnataka, Dept. of Health and family Welfare.
3. Personal Assistant to The Deputy Secretary, dept. of Health and family Welfare.
4. Guard File /Additional copies.

"This is the true translation of Proceedings of govt. of Karnataka made by undersigned Govt. Health & family welfare department."

NOTARY ZAHID HUSSAIN Advocate & Notary Dakshina Kannada Dist. Regd No ... Exp ... GOVT. OF INDIA

05/12/22

NOTARY
D.K. DIST.

ZAHID HUSSAIN, B.A.,LL.B. 05/12/22.
Advocate & Notary